ಮಾಗಡಿ ಪಟ್ಟಣ ಪುರೋಭಿವೃದ್ಧಿ ಯೋಜನೆ

೧೩೯೨ ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಮಾಗಡಿ ಪಟ್ಟಣ ಪುರೋಭಿವೃದ್ಧಿ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಮಂಜೂರಾಗಿರುವ ಒಟ್ಟು ಹಣವೆಷ್ಟು ? (ವರ್ಷವಾರು ವಿವರಗಳನ್ನು ನೀಡುವುದು).

ಆ) ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಣವೆಷ್ಟು ?

ಇ) ಯಾವ ಯಾವ ಬಾಬುಗಳಿಗಾಗಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಲಾಗಿದೆ (ಖರ್ಚಿನ ಪೂರ್ಣ ವಿವರಗಳನ್ನು ನೀಡುವುದು).

ಈ) ಈ ಯೋಜನೆಯಡಿಯಲ್ಲಿ ಮಾರುಕಟ್ಟೆ ಒಳಚರಂಡಿ ವ್ಯವಸ್ಥೆ ರಸ್ತೆ ಮುಂತಾದ ಕಾರ್ಯಗಳನ್ನು ನಡೆಸಲಾಗುತ್ತಿದೆಯೇ ?

ಉ) ಹಾಗಿದ್ದಲ್ಲಿ. ಯಾವಾಗ ಈ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು ಮೀನುಗಾರಿಕೆ ಹಾಗು ವಸತಿ ಮತ್ತು ನಗರಾಭಿವೃದ್ಧಿ ಸಚಿವರು).

ಅ) ಒಟ್ಟು ಹಣ ರೂ. ೧೩. ೯೮ ಲಕ್ಷ.

ವರ್ಷವಾರು ವಿವರ.—

೧) ೧೯೮೭—೮೮	—೨. ೦೦ ಲಕ್ಷ ರೂ.
೨) ೧೯೮೮—೮೯	—೫. ೯೮ ಲಕ್ಷ ರೂ.
೩) ೧೯೮೯—೯೦	—ಇಲ್ಲ.
ಒಟ್ಟು	೩. ೯೮ ಲಕ್ಷ ರೂ.

ಅ) ಕೇಂದ್ರ ಸರ್ಕಾರದ ಪಾಲು	ರಾಜ್ಯ ಸರ್ಕಾರದ ಪಾಲು	ಒಟ್ಟು
ರೂ. ೬. ೯೯ ಲಕ್ಷ	ರೂ. ೬. ೯೯ ಲಕ್ಷ	ರೂ. ೧೩. ೯೮ ಲಕ್ಷ

ಇ) ಯೋಜನೆಯಡಿಯಲ್ಲಿ ೮೧–೮೨ನೇ ಸಾಲಿನಿಂದ ಈವರೆವಿಗೆ ಖರ್ಚಾಗಿರುವ ಹಣದ ವಿವರ

೧) ಭೂಸ್ವಾಧೀನ	...	೧೧. ೩೮ ಲಕ್ಷ ರೂ.
೨) ಭೂಅಭಿವೃದ್ಧಿ	...	೧೪. ೬೫ ಲಕ್ಷ ರೂ.
೩) ಸಾರಿಗೆ ಮತ್ತು ಸಂಪರ್ಕ	...	೮. ೬೦ ಲಕ್ಷ ರೂ.
೪) ಮಂಡಿ ಮಂತು ಮಳಿಗೆ	...	೧೩. ೮೫ ಲಕ್ಷ ರೂ.
೫) ಸುಲಭ ವೆಚ್ಚದ ಶೌಚಾಲಯ	...	೨೭. ೨೭ ಲಕ್ಷ ರೂ.
೬) ಇತರ	...	೧. ೩೬ ಲಕ್ಷ ರೂ.
ಒಟ್ಟು		೭೭. ೧೧ ಲಕ್ಷ ರೂ

ಈ) ಯೋಜನೆಯಡಿಯಲ್ಲಿ ಮಾರುಕಟ್ಟೆ ನಿರ್ಮಾಣ ಮತ್ತು ರಸ್ತೆ ಸುಧಾರಣೆ ಕೆಲಸಗಳನ್ನು ಕೈಗೊಳ್ಳಲಾಗಿದೆ ಆದರೆ ಒಳಚರಂಡಿ ವ್ಯವಸ್ಥೆ ಮಂಜೂರಾಗಿರುವುದಿಲ್ಲ.

ಉ) ಶೀಘ್ರವಾಗಿ.